# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 132 (245) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.12.2024 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಇವರೆಗೂ ಕೆ.ಐ.ಎ.ಡಿ.ಬಿ.ಯಿಂದ ಎಷ್ಟು ಎಕರೆ ರೈತರಿಂದ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; (ವಿವರ ನೀಡುವುದು) | ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೆಐಎಡಿಬಿ ವತಿಯಿಂದ ವಿವಿಧ ಯೋಜನೆಗಳಿಗೆ 1978 ರಿಂದ 2024 ರವರೆಗೆ ಒಟ್ಟು 3185-37 ಎಕರೆ ವಿಸ್ತೀರ್ಣದ ಜಮೀನನ್ನು ಕೆ.ಐ.ಎ.ಡಿ ಕಾಯ್ದೆ ಕಲಂ 28(4) ರಡಿ ವಿವಿಧ ದಿನಾಂಕಗಳಂದು ಅಂತಿಮ ಅಧಿಸೂಚನೆ ಹೊರಡಿಸಿ, ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ |
| ಆ) | ಸದರಿ ಭೂಮಿಯ ಪ್ರಸ್ತುತ ಮಾರುಕಟ್ಟೆಯ ಬೆಲೆಯು ಎಷ್ಟು ಪಟ್ಟು ಹಣವನ್ನು ರೈತರಿಗೆ / ಭೂಮಾಲೀಕರಿಗೆ ನೀಡಲಾಗಿದೆ; (ವಿವರ ನೀಡುವುದು) | ಭೂದರ ಸಲಹಾ ಸಮಿತಿ ಸಭೆಯ ಶಿಫಾರಸ್ಸು ಮತ್ತು ಮಂಡಳಿ ಸಭೆಯ ಅನುಮೋದನೆಯಂತೆ ಎಕರೆ ಒಂದಕ್ಕೆ ದರ ನಿಗದಿಪಡಿಸಿರುವ ವಿವರವನ್ನು **ಅನುಬಂಧ-1**ರ ಕಲಂ 5 ರಲ್ಲಿ ಮಾಹಿತಿ ಒದಗಿಸಲಾಗಿದೆ. |
| (ಇ) | ಭೂಮಾಲೀಕರಿಗೆ ಮತ್ತು ಜಮೀನನ್ನು ಕಳೆದುಕೊಂಡ ರೈತರಿಗೆ ಎಷ್ಟು ಪರಿಹಾರ ನೀಡಲಾಗಿದೆ; ಮತ್ತು ಅವರಿಗೆ ಅಭಿವೃದ್ಧಿ ಆಗಿರುವ ಜಾಗದಲ್ಲಿ ನಿವೇಶನಗಳನ್ನು ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ಭೂಮಾಲೀಕರಿಗೆ ಮತ್ತು ಜಮೀನನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡಲಾಗಿರುವ ಬಗ್ಗೆ **ಅನುಬಂಧ-1** ರ ಕಲಂ 5 ರಲ್ಲಿ ಮಾಹಿತಿ ಒದಗಿಸಲಾಗಿದೆ.<br>ಭೂಮಾಲೀಕರಿಗೆ ಭೂಪರಿಹಾರದ ಬದಲು ಅಭಿವೃದ್ಧಿ ಆಗಿರುವ ಜಾಗದಲ್ಲಿ ಬದಲಿ ನಿವೇಶನ ನೀಡುವ ಕುರಿತು ಸರ್ಕಾರಿ ಆದೇಶ ಸಂಖ್ಯೆ:ಸಿಐ 417 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ:13.08.2007, ಸರ್ಕಾರಿ ಆದೇಶ ಸಂಖ್ಯೆ:ಸಿಐ 495 ಎಸ್‌ಪಿಕ್ಯೂ 2008, ಬೆಂಗಳೂರು ದಿನಾಂಕ:13.05.2010 ಮತ್ತು ಸರ್ಕಾರಿ ಆದೇಶ ಸಂಖ್ಯೆ:ಸಿಐ 103 ಎಸ್‌ಪಿಕ್ಯೂ (ಇ) 2019, ಬೆಂಗಳೂರು ದಿ:23.02.2021 ರ ಸುತ್ತೋಲೆಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಈ) | ಅಭಿವೃದ್ಧಿ ಆಗಿರುವ ಜಾಗದಲ್ಲಿ ನಿವೇಶನ ನೀಡುವ ಗುರಿ ಇದ್ದಲ್ಲಿ ಸರ್ಕಾರ ಯಾವ ಯಾವ ಅಭಿವೃದ್ಧಿ ಜಾಗಗಳಲ್ಲಿ ನಿವೇಶನ ನೀಡುವುದು? (ಸಂಪೂರ್ಣ ವಿವರ ನೀಡುವುದು) | ಕೆ.ಐ.ಎ.ಡಿ.ಬಿ ವತಿಯಿಂದ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಈ ಕೆಳಕಂಡ ಕೈಗಾರಿಕಾ ಪ್ರದೇಶಗಳನ್ನಾಗಿ ಅಭಿವೃದ್ಧಿಪಡಿಸಿ ಹಂಚಿಕೆ ಮಾಡಲಾಗಿರುತ್ತದೆ. |

| SL No | Industrial Area | No Units | Extent (Acres) |
|---|---|---|---|
| 1 | ATTIBELE | 156 | 234.09 |

| | | | |
|---|---|---|---|
| 2 | BMS-JIGANI LINK ROAD | 249 | 628.11 |
| 3 | BOMMASANDRA | 591 | 836.89 |
| 4 | BOMMASANDRA IV PHASE | 126 | 159.13 |
| 5 | JIGANI I PHASE | 224 | 332.95 |
| 6 | JIGANI II PHASE | 164 | 215.71 |
| 7 | VEERASANDRA | 79 | 95.15 |
| | **Total** | **1,589** | **2,502.03** |

**ಸಂಖ್ಯೆ: ಸಿಐ 488 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 24 (261) ರ ಕರಡು ಉತ್ತರ ಅನುಬಂಧ-1**

| ಕ್ರ ಸಂ | ಯೋಜನೆಯ ಹೆಸರು ಗ್ರಾಮ | ಅಂತಿಮ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಅಂತಿಮ ಅಧಿಸೂಚನೆ ವಿಸ್ತೀರ್ಣ (ಎ-ಗು) | ಎಕರೆ ಒಂದಕ್ಕೆ ನಿಗದಿಪಡಿಸಿರುವ ಭೂದರ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ 1ನೇ ಹಂತ ಬೊಮ್ಮಸಂದ್ರ | ಸಿಐ 17 ಎಸ್‌ಪಿಕ್ಯೂ 1976 ದಿನಾಂಕ:22.06.1978 | 232–04 | 0.26 |
| 2 | ಹೆಬ್ಬಗೋಡಿ | ಸಿಐ 101 ಎಸ್‌ಪಿಕ್ಯೂ 1980 ದಿನಾಂಕ:08.09.1980 | 181–37 | 0.22 |
| 3 | ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ 2ನೇ ಹಂತ ಬೊಮ್ಮಸಂದ್ರ | ಸಿಐ 38 ಎಸ್‌ಪಿಕ್ಯೂ 1979 ದಿನಾಂಕ:14.08.1980 | 75–15 | 0.20 |
| 4 | ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ 3ನೇ ಹಂತ ಬೊಮ್ಮಸಂದ್ರ | ಸಿಐ 159 ಎಸ್‌ಪಿಕ್ಯೂ 1980 ದಿನಾಂಕ:01.10.1981 | 290–12 | 0.26 |
| 5 | ಅತ್ತಿಬೆಲೆ ಕೈಗಾರಿಕಾ ಪ್ರದೇಶ ವಳಗಾನಹಳ್ಳಿ, ಇಚ್ಚಂಗೂರು, ಕೃಷ್ಣಸಾಗರ | ಸಿಐ 222 ಎಸ್‌ಪಿಕ್ಯೂ 1979 ದಿನಾಂಕ:08.06.1982 | 119–30 | 0.26 |
| 6 | ಇಚ್ಚಂಗೂರು, | ಸಿಐ 222 ಎಸ್‌ಪಿಕ್ಯೂ 1979 ದಿನಾಂಕ:20.11.1984 | 92–10 | 0.26 |
| 7 | ಜಿಗಣಿ ಕೈಗಾರಿಕಾ ಪ್ರದೇಶ 1ನೇ ಹಂತ ಜಿಗಣಿ | ಸಿಐ 222 ಎಸ್‌ಪಿಕ್ಯೂ 1981 ದಿ:15.08.1985 | 370–04 | 0.26 |
| | ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ 4ನೇ ಹಂತ ಯಾರಂಡನಹಳ್ಳಿ, ಕಾಚನಾಯಕನಹಳ್ಳಿ | ಸಿಐ 174 ಎಸ್‌ಪಿಕ್ಯೂ 1992 ದಿನಾಂಕ:20.09.1995 | 90–30 | 5.00<br>6.00 |
| 8 | ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ 4ನೇ ಹಂತ ಯಾರಂಡನಹಳ್ಳಿ | ಸಿಐ 174 ಎಸ್‌ಪಿಕ್ಯೂ 1992 ದಿನಾಂಕ:08.08.1996 | 128–18 | 6.00 |
| 9 | ಕಾಚನಾಯಕನಹಳ್ಳಿ | | 19–31 | 6.00 |
| 10 | ಕಿತ್ತಗಾನಹಳ್ಳಿ | | 230–19 | 6.00 |
| 11 | ಜಿಗಣಿ ಬೊಮ್ಮಸಂದ್ರ ಲಿಂಕ್ ರಸ್ತೆ ಜಿಗಣಿ ಬಂಡಿಕಲ್ಲಸಂದ್ರ, ರಾಜಾಪುರ, ಯಾರಂಡನಹಳ್ಳಿ, ಕ್ಯಾಲಸನಹಳ್ಳಿ, | ಸಿಐ 174 ಎಸ್‌ಪಿಕ್ಯೂ 1997 ದಿನಾಂಕ:20.07.1999 | 476–30 | 6.00 |
| 12 | ಜಿಗಣಿ ಬೊಮ್ಮಸಂದ್ರ ಲಿಂಕ್‌ರಸ್ತೆ ಜಿಗಣಿ ಬಂಡಿಕಲ್ಲಸಂದ್ರ, ರಾಜಾಪುರ, ಯಾರಂಡನಹಳ್ಳಿ, ಕ್ಯಾಲಸನಹಳ್ಳಿ | ಸಿಐ 97 ಎಸ್‌ಪಿಕ್ಯೂ 1997 ದಿನಾಂಕ:27.04.2002 | 107–29 | 7.00 |

| | | | | |
|---|---|---|---|---|
| 13 | ಜಿಗಣಿ ಬೊಮ್ಮಸಂದ್ರ ಲಿಂಕ್ ರಸ್ತೆ ಜಿಗಣಿ, ರಾಜಾಪುರ | ಸಿಐ 387 ಎಸ್‌ಪಿಕ್ಯೂ 2001 ದಿನಾಂಕ:03.09.2003 | 127–04 | 9.50 |
| 15 | ಕೈಗಾರಿಕಾ ಪ್ರದೇಶ ಮುತ್ತನಲ್ಲೂರು ಅಮಾನಿಕೆರೆ, ಸೊಳ್ಳೇಪುರ, ಹಂದೇನಹಳ್ಳಿ | ಸಿಐ 59 ಎಸ್‌ಪಿಕ್ಯೂ 2024 ದಿ:03.10.2024 | 291–37 | ಭೂದರ ನಿಗದಿಯಾಗಲು ಬಾಕಿಯಿದೆ |
| 16 | ಕೈಗಾರಿಕಾ ಪ್ರದೇಶ ಬಿಕ್ಕನಹಳ್ಳಿ | ಸಿಐ 52 ಎಸ್‌ಪಿಕ್ಯೂ 2024 ದಿ:03.10.2024 | 45–20 | ಭೂದರ ನಿಗದಿಯಾಗಲು ಬಾಕಿಯಿದೆ |
| 17 | ಕೈಗಾರಿಕಾ ಪ್ರದೇಶ ಎಸ್.ಮೇಡಹಳ್ಳಿ ಅಡಿಗಾರಕಲ್ಲಹಳ್ಳಿ | ಸಿಐ 58 ಎಸ್‌ಪಿಕ್ಯೂ 2024 ದಿ:02.12.2024 | 305–27 | ಭೂದರ ನಿಗದಿಯಾಗಲು ಬಾಕಿಯಿದೆ |
| | | ಒಟ್ಟು | **3185–37** | |

ವಿಶೇಷ ಜಿಲ್ಲಾಧಿಕಾರಿ

ಅನುಬಂಧ - 2



# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳಿಗೆ ಭೂ ಪರಿಹಾರದ ಬದಲಾಗಿ ಅಭಿವೃದ್ಧಿಪಡಿಸಿದ 8500 ಚ.ಅಡಿಯಿಂದ 9583 ಚ.ಅಡಿ ವಿಸ್ತೀರ್ಣದ ಜಮೀನು ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2007 ದಿನಾಂಕ: 13.08.2007
2. ಸಿ.ಇ.ಓ. & ಇ.ಎಂ., ಕೆ.ಐ.ಎ.ಡಿ.ಬಿ.ಯವರ ಪತ್ರ ಸಂಖ್ಯೆ: ಕೆಐಎಡಿಬಿ/ ಕೇಂಕ/ ವಿಶ/ ಭೂಸ್ವಾ/ 1881/ 12669/ 2009-10 ದಿನಾಂಕ: 13.01.2010

* * * * *

ಪ್ರಸ್ತಾವನೆ:

ಸರ್ಕಾರದ ಕೈಗಾರಿಕಾ ನೀತಿಯ ಅನುಸಾರ ಕೈಗಾರಿಕೆಗಳನ್ನು ಸ್ಥಾಪಿಸಲು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕರಣಗಳಲ್ಲಿ ಭೂ ಮಾಲೀಕರಿಗೆ ಉದಾರವಾಗಿ ಪರಿಹಾರ ನೀಡುವ ನೀತಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅನುಸರಿಸುತ್ತಿದೆ. ಸದರಿ ಮಂಡಳಿಯಿಂದ ಸ್ವಾಧೀನವಾಗುತ್ತಿರುವ ಜಮೀನಿಗೆ ಪಾಲುದಾರಿಕೆಯ ಮೇಲೆ ನಗದು ಪರಿಹಾರ ಅಥವಾ ನಗದು ಬದಲಾಗಿ ಅದೇ ಪ್ರದೇಶದಲ್ಲಿ ಸ್ವಾಧೀನಪಡಿಸಿಕೊಂಡ ಪ್ರತಿ 10 ಗುಂಟೆ ಜಮೀನಿಗೆ 2.125 ಚ.ಅಡಿ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಜಮೀನನ್ನು ನೀಡಲು ಮತ್ತು ಪ್ರತಿ 10 ಗುಂಟೆಗಿಂತ ಕಡಿಮೆ ವಿಸ್ತೀರ್ಣದ ಜಮೀನಿಗೆ ಪರಿಹಾರವನ್ನು ಹಣದ ರೂಪದಲ್ಲಿ ಹಾಗೂ 10 ಗುಂಟೆ ನಂತರದ ದಶಾಂಶದ ನಡುವೆ ಬರುವ ಭಾಗಾಂಶದ ವಿಸ್ತೀರ್ಣದ ಪರಿಹಾರವನ್ನು ಹಣದ ರೂಪದಲ್ಲಿ ನೀಡಲು ಅಂದರೆ ಕೈಗಾರಿಕಾ ಸ್ಥಾಪನೆಗೆ ಮತ್ತು ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಜಮೀನುಗಳನ್ನು ವಶಪಡಿಸಿಕೊಳ್ಳುವಾಗ ಯಾವ ರೈತರಿಂದ / ಭೂ ಮಾಲೀಕರಿಂದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುವುದೋ ಅವರಿಗೆ ಹಣದ ಬದಲಾಗಿ, ಪ್ರತಿ ಎಕರೆಗೆ 8500 ಚ.ಅಡಿ ಅಭಿವೃದ್ಧಿಪಡಿಸಿದ ಜಮೀನನ್ನು ನೀಡಲು ಓದಲಾದ (1)ರ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಆದರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ ರೈತ ಹೋರಾಟ ಸಮಿತಿ ಇವರು ಮಂಡಳಿಗೆ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಿ, ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳಿಗಾಗಿ ಭೂಸ್ವಾಧೀನಪಡಿಸುವ ಜಮೀನಿಗೆ ಹಾಲಿ ಇರುವಂತೆ ಪ್ರತಿ ಎಕರೆ ಒಂದಕ್ಕೆ 8500 ಚ.ಅಡಿ ಬದಲಾಗಿ ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಿರುವ ಆದೇಶ ಸಂಖ್ಯೆ: ನಅಇ/ 427/ ಬೆಂಭೂಸ್ವಾ/ 2007 ದಿನಾಂಕ: 02.04.2008ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನೀಡುತ್ತಿರುವಂತೆ ಪ್ರತಿ ಎಕರೆಗೆ 9583 ಚ.ಅಡಿ ಅಭಿವೃದ್ಧಿಪಡಿಸಿದ ಜಮೀನನ್ನು ಭೂ ಮಾಲೀಕರಿಗೆ ನೀಡುವಂತೆ ಕೋರಿರುತ್ತಾರೆ. ಅದರಂತೆ, ದಿನಾಂಕ: 19.12.2008ರಂದು ನಡೆದ ಮಂಡಳಿ ಸಭೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರಕ್ಕೆ ಬದಲಾಗಿ ಪ್ರತಿ ಎಕರೆಗೆ 9583 ಚ.ಅಡಿ ಅಭಿವೃದ್ಧಿಪಡಿಸಿದ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನುಸರಿಸುತ್ತಿರುವ ಮಾದರಿಯಲ್ಲಿ ನೀಡುವ ಬಗ್ಗೆ ನಿರ್ಣಯಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಹಣದ ಬದಲಾಗಿ ಈಗಾಗಲೇ ನೀಡುತ್ತಿರುವ 8500 ಚ.ಅಡಿ ಜಮೀನಿನ ಬದಲಾಗಿ 9583 ಚ.ಅಡಿ ಜಮೀನನ್ನು ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಆದೇಶ ಹೊರಡಿಸಬೇಕಾಗಿರುವುದರಿಂದ ಈ ಆದೇಶ:

. . . . 2

**ಸರ್ಕಾರಿ ಆದೇಶ ಸಂಖ್ಯೆ: ಸಿಐ 495 ಎಸ್‌ಪಿಕ್ಯೂ 2008, ಬೆಂಗಳೂರು, ದಿನಾಂಕ: 13ನೇ ಮೇ 2010**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2007, ದಿನಾಂಕ: 13.08.2007ರಲ್ಲಿ ಆದೇಶಿಸಿರುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಸ್ವಾಧೀನಪಡಿಸುತ್ತಿರುವ ಭೂ ಮಾಲೀಕರ ಜಮೀನಿಗೆ ಪರಿಹಾರ ಹಣದ ಬದಲಾಗಿ ಪ್ರಸ್ತುತ ಜಾರಿಯಲ್ಲಿರುವ ಪ್ರತಿ ಎಕರೆ ಜಮೀನಿಗೆ ಪರಿಹಾರವಾಗಿ 8500 ಚ.ಅಡಿಯಿಂದ 9583 ಚ.ಅಡಿ ವಿಸ್ತೀರ್ಣಕ್ಕೆ ಹೆಚ್ಚಿಸಿ, ಅಭಿವೃದ್ಧಿಪಡಿಸಿದ ಜಮೀನನ್ನು ನೀಡಲು ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2007ರ ದಿನಾಂಕ: 13.08.2007ರಲ್ಲಿ ತಿಳಿಸಿರುವ ಉಳಿದ ನಿಬಂಧನೆಗಳು ಜಾರಿಯಲ್ಲಿರುತ್ತವೆ.

ಈ ಯೋಜನೆಯು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

K. H. Seshagiri 13.5.

(ಕೆ.ಹೆಚ್. ಶೇಷಗಿರಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಕೈಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 200 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕೈಗಾರಿಕಾಭಿವೃದ್ಧಿ ಶಾಖೆ ಇವರಿಗೆ ಒದಗಿಸಲು ಕೋರಿದೆ.

**ಪ್ರತಿಯನ್ನು:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಸರ್ಕಾರದ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಮತ್ತು ಕಾರ್ಯ ನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ., ನೃಪತುಂಗ ರಸ್ತೆ, ಬೆಂಗಳೂರು.
7. ಮುಖ್ಯ ಅಭಿವೃದ್ಧಿ ಅಧಿಕಾರಿ, ಕೆ.ಐ.ಎ.ಡಿ.ಬಿ., ನೃಪತುಂಗ ರಸ್ತೆ, ಬೆಂಗಳೂರು.
8. ವಿಶೇಷ ಜಿಲ್ಲಾಧಿಕಾರಿಗಳು, ಕೆ.ಐ.ಎ.ಡಿ.ಬಿ., ನೃಪತುಂಗ ರಸ್ತೆ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ವ್ಯವಹಾರಗಳ ಇಲಾಖೆ (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ವಿಕಾಸ ಸೌಧ, ಬೆಂಗಳೂರು
12. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು
13. ವಾರದ ಗೆಜೆಟ್ – 4 ಪ್ರತಿಗಳು
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

7) ಮೇಲ್ಕಂಡ ಮಾರ್ಗಸೂಚಿಗಳನ್ನು ಪಾಲಿಸದೇ ಈ ಜಿಲ್ಲೆಗಳ ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿ ಜಮೀನಿನ ಯೋಜನಾ ಅನುಮೋದನೆ ನೀಡಿದಲ್ಲಿ, ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನಾಗರತ್ನಮ್ಮ .ಜಿ)**
ಪೀಠಾಧಿಕಾರಿ (ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

**PR-195**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ಕೊಡಗು ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿರುವ 286 ಮನೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯವನ್ನು ಕಲ್ಪಿಸುವ ಮತ್ತು ಸದರಿ ಸೌಲಭ್ಯಗಳಿಗೆ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಬಿಡುಗಡೆಯಾಗಿರುವ ಅನುದಾನವನ್ನು ಬಳಸಲು ಆಡಳಿತಾತ್ಮಕ ಅನುಮೋದನೆಯ ಬಗ್ಗೆ

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕಂಇ 249 ಟಿಎನ್‌ಆರ್ 2020, ದಿನಾಂಕ:18.06.2020
2. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ:RGRHCL 05 KodaguFlood and Relief 10.12.2018, ದಿನಾಂಕ:16.11.2019 ಮತ್ತು 03.08.2020.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆದೇಶದಲ್ಲಿ ಇನ್ಫೋಸಿಸ್ ಸಂಸ್ಥೆಯ ವತಿಯಿಂದ ಕೊಡಗು ಜಿಲ್ಲೆಯ ಮಾದಪುರದಲ್ಲಿ ನಿರ್ಮಿಸಲಾಗುತ್ತಿರುವ 200 ಮನೆಗಳಿಗೆ ಮತ್ತು ಕರ್ನಾಟಕ ರಾಜ್ಯ ಪುನರ್ವಸತಿ ಕೇಂದ್ರದ ವತಿಯಿಂದ ಕೆ.ನಿಡುಗಣೆಯಲ್ಲಿ ನಿರ್ಮಿಸಲಾಗುತ್ತಿರುವ 86 ಮನೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ ಪ್ರಕೃತಿ ವಿಕೋಪ ಖಾತೆಯಿಂದ ಕಂದಾಯ ಇಲಾಖೆಯ ವಿಪತ್ತು ಪರಿಹಾರ ನಿಧಿ ಖಾತೆಗೆ ರೂ.15,26,21,000/-ಗಳನ್ನು ಅನುದಾನ ಬಿಡುಗಡೆ ಮಾಡಿದ್ದು, ಸದರಿ ಅನುದಾನವನ್ನು ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (2) ರ ಪತ್ರಗಳನ್ನು ಕೊಡಗು ಜಿಲ್ಲೆಯಲ್ಲಿ 2018-19ನೇ ಸಾಲಿನ ಜೂನ್‌ನಿಂದ ಡಿಸೆಂಬರ್ ತಿಂಗಳವರೆಗೆ ಮಳೆಯು ಅತ್ಯಂತ ದಾಖಲೆ ಪ್ರಮಾಣದಲ್ಲಿ ಸುರಿದಿದ್ದು, ಅದರಿಂದ ನದಿಗಳು ಉಕ್ಕಿ ಹರಿದು, ಭೂಕುಸಿತಗಳು ಉಂಟಾಗಿ ಅಪಾರ ಪ್ರಮಾಣದಲ್ಲಿ

ರಚಿತವಾಗಿರುವ ಜಿಲ್ಲಾ ಮಟ್ಟದ ಬಂಡವಾಳ ಹೂಡಿಕೆ ಸಮಿತಿಯ ಕಾರ್ಯಾಚರಣೆ ಕುರಿತು ಮಾರ್ಗಸೂಚಿಗಳನ್ನು ಹೊರಡಿಸುವ ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 180 ಎಸ್‌ಪಿಐ 2018, ಬೆಂಗಳೂರು, ದಿನಾಂಕ 01.07.2020**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯ ಮುಂದೆ ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶಗಳಲ್ಲಿ ಯೋಜನಾ ಅನುಮೋದನೆ ಹಾಗೂ ಜಮೀನು ಹಂಚಿಕೆ ಮಾಡುವಂತೆ ಕೈಗಾರಿಕೋದ್ಯಮಿಗಳಿಂದ ಅರ್ಜಿಗಳು ಸ್ವೀಕೃತವಾದ ನಂತರ, ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಲು ಆದೇಶಿಸಿದೆ.

1) *ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರು ಕೈಗಾರಿಕೋದ್ಯಮಿಗಳು ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶಗಳಲ್ಲಿ ಯೋಜನಾ ಅನುಮೋದನೆ ಹಾಗೂ ಜಮೀನು ಹಂಚಿಕೆ ಮಾಡಲು ಕೋರಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಬೇಕು;*

2) *ಅರ್ಜಿಗಳನ್ನು ಸ್ವೀಕರಿಸಿದ ನಂತರ, ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಗೆ ಜಮೀನು ಪರಿಶೀಲನಾ ಸಮಿತಿ (Land Audit Committee) ಯ ಮುಂದೆ ಅರ್ಜಿಗಳನ್ನು ಪರಿಶೀಲನೆಗಾಗಿ ಮಂಡಿಸಲು ಕೋರುವುದು;*

3) *ಜಮೀನು ಪರಿಶೀಲನಾ ಸಮಿತಿಯು ಪ್ರವರ್ತಕರು ಕೋರುವ ಜಮೀನಿನ ಉಪಯೋಗವನ್ನು ಪರಿಶೀಲಿಸಿ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಅಭಿವೃದ್ಧಿಯಾಗಿರುವುದನ್ನು ಖಾತರಿ ಮಾಡಿಕೊಂಡು, ನಿವೇಶನಗಳ ಹಂಚಿಕೆ ಮಾಡಲು ಯೋಗ್ಯವಿದೆಯೇ ಹಾಗೂ ಲಭ್ಯತೆ ಇದೆಯೇ ಎಂದು ಪರಿಶೀಲಿಸಿ, ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಗೆ ಯೋಜನಾ ಅನುಮೋದನೆ ಹಾಗೂ ಜಮೀನು ಹಂಚಿಕೆ ಕುರಿತು ಶಿಫಾರಸ್ಸು ಕಳುಹಿಸುವುದು;*

4) *ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯು ಜಮೀನು ಪರಿಶೀಲನಾ ಸಮಿತಿಯಿಂದ ಸ್ವೀಕೃತವಾದ ವರದಿಯನ್ವಯ ಯೋಜನೆಗೆ ಅನುಮೋದನೆ ಹಾಗೂ ಜಮೀನು ಹಂಚಿಕೆ ಕುರಿತು ಅನುಮೋದನೆ ನೀಡುವುದು;*

5) *ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯು ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿ ಯಾವುದೇ ಜಮೀನಿನ ಅವಶ್ಯಕತೆ ಇಲ್ಲದೇ ಇತರೆ ಯಾವುದೇ ನಿಯಮಾನುಸಾರ ಪಡೆಯುವ ಜಮೀನಿನ ಯೋಜನಾ ಅನುಮೋದನೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯು ತನ್ನ ಹಂತದಲ್ಲಿಯೇ ಅನುಮೋದನೆ ನೀಡುವುದು;*

6) ಇಲ್ಲಿಯವರೆಗೂ DLSWCC ಯು KIADB ಕೈಗಾರಿಕಾ ಪ್ರದೇಶಗಳಲ್ಲಿ ಯೋಜನಾ ಅನುಮೋದನೆ ಹಾಗೂ ಜಮೀನು ಹಂಚಿಕೆ ಕುರಿತು Subject to Land Availability ಎಂದು ಅನುಮೋದನೆ ನೀಡಿರುವ ಎಲ್ಲಾ ಪ್ರಕರಣಗಳ ಅನುಮೋದನೆಗಳನ್ನು ತಡೆಹಿಡಿಯಲಾಗಿದೆ.

(ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2015ರನ್ವಯ ರೂ. 15 ಕೋಟಿವರೆಗಿನ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಿಗೆ ಸದರಿ ಸಮಿತಿಯು ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಆದೇಶದಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮುಂದೆ ಬರುವ ಎಲ್ಲಾ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನನ್ನು ಪರಿಶೀಲಿಸಲು ಹಾಗೂ ಮಂಜೂರು ಮಾಡಲು ಶಿಫಾರಸ್ಸು ಮಾಡುವುದಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ರಚಿಸಲಾಗಿದೆ. ಸದರಿ ಸಮಿತಿಯು ಪ್ರವರ್ತಕರು ಕೋರುವ ಜಮೀನಿನ ಉಪಯೋಗವನ್ನು ಪರಿಶೀಲಿಸಿ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಅಭಿವೃದ್ಧಿಯಾಗಿರುವುದನ್ನು ಖಾತರಿ ಮಾಡಿಕೊಂಡು, ನಿವೇಶನಗಳ ಹಂಚಿಕೆ ಮಾಡಲು ಯೋಗ್ಯವಿದೆಯೇ ಹಾಗೂ ಲಭ್ಯತೆ ಇದೆಯೇ ಎಂದು ಪರಿಶೀಲಿಸಿ, ಸಂಬಂಧಪಟ್ಟ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ ಅಥವಾ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮುಂದೆ ಪ್ರಸ್ತಾವನೆಯನ್ನು ತನ್ನ ಶಿಫಾರಸ್ಸಿನೊಂದಿಗೆ ಮಂಡಿಸುತ್ತದೆ.

ಆದರೆ, ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸುತ್ತಿರುವ ಪ್ರಸ್ತಾವನೆಗಳು ಯಾವುದೇ ಜಮೀನು ಪರಿಶೀಲನಾ ಸಮಿತಿ (Land Audit Committee) ಯ ಮುಂದೆ ಬರದೇ, ನೇರವಾಗಿ ಡಿ.ಎಲ್.ಎಸ್.ಡಬ್ಲ್ಯೂ.ಸಿ.ಸಿ. ಸಭೆಗೆ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರುಗಳು ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಅಭಿವೃದ್ಧಿಯಾಗದೇ ಇದ್ದರೂ ಮತ್ತು ಜಮೀನಿನ ಲಭ್ಯತೆ ಇಲ್ಲದಿದ್ದರೂ ಸಮಿತಿ ಮುಂದೆ ಮಂಡಿಸಿ, ರೂ. 15 ಕೋಟಿವರೆಗಿನ ಯೋಜನೆಗಳಿಗೆ ಅನುಮೋದನೆ ನೀಡಿ, ಜಮೀನಿನ ಲಭ್ಯತೆ ಕುರಿತು ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿ ಸದರಿ ಜಮೀನಿನ ಲಭ್ಯತೆ ಇಲ್ಲದಿದ್ದರೂ ಸಹ Subject to Land Availability ಎಂದು ಅನುಮೋದನೆ ನೀಡುತ್ತಿರುವುದು ಕಂಡು ಬಂದಿರುತ್ತದೆ. ಈ ತರಹದ ಅನುಮೋದನೆಗಳು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯು ಹೆಚ್ಚಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಜಿಲ್ಲೆಗಳ ಸಂಬಂಧಪಟ್ಟ ಕೈಗಾರಿಕೋದ್ಯಮಿಗಳು ಅನುಮೋದನಾ ಪತ್ರ ಪಡೆದು ಕೆ.ಐ.ಎ.ಡಿ.ಬಿ.ಯಲ್ಲಿ ಜಮೀನಿಗಾಗಿ ಅರ್ಜಿ ಸಲ್ಲಿಸಿ, ಜಮೀನು ಲಭ್ಯವಿಲ್ಲದ ಕಾರಣ ವಿನಾಕಾರಣ ಅಲೆದಾಡುತ್ತಿರುವುದು ಹಾಗೂ ಈ ಕುರಿತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೂ ಸಹ ಮನವಿಗಳನ್ನು ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ನಿವೇಶನಗಳು ಹಂಚಿಕೆಗೆ ಲಭ್ಯವಿರುವ ಕುರಿತು ಲಿಖಿತ ರೂಪದಲ್ಲಿ ಖಚಿತಪಡಿಸಿಕೊಳ್ಳುವವರೆಗೂ, ಕೈಗಾರಿಕಾ ಪ್ರದೇಶದಲ್ಲಿ ಯೋಜನಾ ಮಂಜೂರಾತಿ ಬಗ್ಗೆ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳಬಾರದು ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

ಮೇಲೆ ಓದಲಾದ (3)ರ ಪತ್ರದಲ್ಲೂ ಸಹ ಕೆ.ಐ.ಎ.ಡಿ.ಬಿ.ಯ ಕೈಗಾರಿಕಾ ಪ್ರದೇಶದಲ್ಲಿ ಜಮೀನು ಹಂಚಿಕೆ ಮಾಡುವಂತೆ ಕೈಗಾರಿಕೋದ್ಯಮಿಗಳಿಂದ ಅರ್ಜಿಗಳು ಸ್ವೀಕೃತವಾದ ನಂತರ ಜಮೀನು ಲಭ್ಯತೆ ಇರುವ ಕುರಿತು ಆಯಾ ವಲಯದ ಕಾರ್ಯಪಾಲಕ ಅಭಿಯಂತರರಿಂದ ಲಿಖಿತ ಮೂಲಕ ವರದಿ ಪಡೆದ ನಂತರವೇ ನಿವೇಶನ ಲಭ್ಯವಿದ್ದಲ್ಲಿ ಮಾತ್ರ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಯೋಜನೆಗಳನ್ನು ಮಂಜೂರು ಮಾಡುವ ತೀರ್ಮಾನಗಳನ್ನು ತೆಗೆದುಕೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರಿಗೆ ನಿರ್ದೇಶಿಸಲಾಗಿದೆ.

ಆದಾಗ್ಯೂ ಸಹ, ಈ ಜಿಲ್ಲೆಗಳಲ್ಲಿ ಕೆ.ಐ.ಎ.ಡಿ.ಬಿ.ಯ ಕೈಗಾರಿಕಾ ಪ್ರದೇಶದಲ್ಲಿ ಜಮೀನು ಹಂಚಿಕೆಗೆ ಲಭ್ಯವಿಲ್ಲದಿದ್ದರೂ ಸಹ ಯೋಜನೆಗಳಿಗೆ Subject to Land Availability ಎಂದು ಅನುಮೋದನೆ ನೀಡುತ್ತಿರುವುದು ಕಂಡು ಬಂದಿರುತ್ತದೆ.

ಈ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 15.06.2020 ರಂದು ನಡೆದ ಸಭೆಯಲ್ಲಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 ರಲ್ಲಿ

7. Additional employment for 150 people in addition to 500 people.
8. Extension of time by 2 years to implement the project, with a condition that further extension of time will not be granted.

All other terms and conditions indicated in the Government Order No. CI 196 SPI 2011, dated 22.08.2011 read at (1) above, remain unaltered.

This Government order is issued in lieu of the earlier issued Government order vide no. CI 196 SPI 2011, Dated 29.06.2020. Hence the Government order dated 29.06.2020 stands withdrawn.

By Order and in the name of the
Governor of Karnataka,

**(NAGARATHNAMMA .G)**
Desk Officer (Technical Cell),
Commerce & Industries Department.

**PR-194**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 ರಡಿ ರಚಿತವಾಗಿರುವ ಜಿಲ್ಲಾ ಮಟ್ಟದ ಬಂಡವಾಳ ಹೂಡಿಕೆ ಸಮಿತಿಯ ಕಾರ್ಯಾಚರಣೆ ಕುರಿತು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ. ಸಿಐ 158 ಎಸ್‌ಪಿಐ 2011, ದಿನಾಂಕ: 17.05.2014.
2) ಸರ್ಕಾರದ ಪತ್ರ ಸಂಖ್ಯೆ. ಸಿಐ 171 ಎಸ್.ಪಿ.ಕ್ಯೂ. (ಇ) 2019, ದಿನಾಂಕ: 24.12.2019.
3) ಸರ್ಕಾರದ ಪತ್ರ ಸಂಖ್ಯೆ. ಸಿಐ 171 ಎಸ್.ಪಿ.ಕ್ಯೂ. (ಇ) 2019, ದಿನಾಂಕ: 14.05.2020.
4) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 15.06.2020 ರಂದು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 ರಲ್ಲಿ ರಚಿತವಾಗಿರುವ ಜಿಲ್ಲಾ ಮಟ್ಟದ ಬಂಡವಾಳ ಹೂಡಿಕೆ ಸಮಿತಿಯ ಕಾರ್ಯಾಚರಣೆ ಕುರಿತು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ ನಡೆದ ಸಭೆಯ ನಡವಳಿ.

–::O::–

**ಪ್ರಸ್ತಾವನೆ:**

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರಡಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ರಚಿಸಲಾಗಿದೆ. ಕರ್ನಾಟಕ ಕೈಗಾರಿಕೆಗಳ